ಆ) ಕೆ.ಜಿ.ಎಫ್‌ನಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸ್ಟಾಂಪ್ ಪೇಪರ್ ಮಾರಾಟ ಮಾಡುವ ವಿಚಾರ ಕುರಿತು.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಕೆ.ಜಿ.ಎಫ್. ನಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸ್ಟಾಂಪ್ ಪೇಪರ್ ಮಾರಾಟ ಮಾಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಪರ್ಯಾಯ ವ್ಯವಸ್ಥೆಯನ್ನು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಅವರು ಹೇಳಿದ ಹಾಗೆ ಬಿಳಿ ಹಾಳೆ ಅಥವಾ ದಸ್ತಾವೇಜು ಶೀಟುಗಳ ಮೇಲೆ ಚರಸ್ಥಿರ ಆಸ್ತಿಗಳನ್ನು ನೊಂದಾಯಿಸಿಕೊಳ್ಳಬಹುದಾಗಿದೆ. ಈಗ ಅದರ ಬಗ್ಗೆ ನಾನು ಒಂದು ಹೇಳಿಕೆಯನ್ನು ಓದ ಬಯಸುತ್ತೇನೆ.

ದಿನಾಂಕ 1–4–2003 ರಿಂದ ಛಾಪಾ ಕಾಗದ ಬಳಕೆಯನ್ನು ನಿಲ್ಲಿಸಲಾಗಿದೆ.

ಪರ್ಯಾಯ ವ್ಯವಸ್ಥೆಯಾಗಿ ನೋಂದಣಿಗೆ ಸಂಬಂಧಿಸಿದಂತೆ ಬಿಳಿ ಹಾಳೆ ಅಥವಾ ದಸ್ತಾವೇಜು ಷೀಟುಗಳ ಮೇಲೆ ಚರ/ಸ್ಥಿರಾಸ್ತಿಗಳನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ಆದ್ದರಿಂದ, ನೋಂದಣಿ ಮಾಡಿಸಿಕೊಳ್ಳುವ ದಸ್ತಾವೇಜುಗಳಿಗೆ ಈಗ ಛಾಪಾ ಕಾಗದಗಳ ಅವಶ್ಯಕತೆ ಇರುವುದಿಲ್ಲ. ನೋಂದಣಿಗೆ ಸಂಬಂಧಿಸಿದ ದಸ್ತಾವೇಜುಗಳಿಗೆ ಯಾವುದೇ ರಾಷ್ಟ್ರೀಕೃತ ಹಾಗೂ ಷೆಡ್ಯೂಲ್ ಬ್ಯಾಂಕಿನಲ್ಲಿ ಡಿ.ಡಿ./ ಪೇ ಆರ್ಡರ್ ಮೂಲಕ ಪಾವತಿಸಿ ಉಪ ನೋಂದಣಿ ಕಛೇರಿಯಲ್ಲಿ ಹಾಜರುಪಡಿಸಿ ದಸ್ತಾವೇಜುಗಳನ್ನು ನೋಂದಾಯಿಸಲು ವ್ಯವಸ್ಥೆ ಮಾಡಲಾಗಿದೆ.

ನೋಂದಣಿಗೆ ಐಚ್ಛಿಕವಾಗಿರುವ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಒಂದು ಪ್ರಕರಣದಲ್ಲಿ 500/– ರೂಗಳಿಗೆ ಮೀರದೆ ಡಾಕ್ಯುಮೆಂಟ್ ಷೀಟನ್ನು ಸಾರ್ವಜನಿಕರಿಂದ ಹಣ ಪಾವತಿಸಿಕೊಂಡು State Bank of Mysore, State Bank of India, State Bank of Hyderabad ಬ್ಯಾಂಕುಗಳ ಮೂಲಕ ವಿತರಿಸಲಾಗುತ್ತಿದೆ.

ಕೆ.ಜಿ.ಎಫ್.ನಲ್ಲಿ State Bank of Mysoreನ ಶಾಖೆಯಿದ್ದು, ಸದರಿ ಶಾಖೆಯಿಂದ ನೋಂದಣಿಗೆ ಐಚ್ಛಿಕವಾಗಿರುವ ದಸ್ತಾವೇಜುಗಳಿಗೆ ಬೇಕಾಗುವ ಡಾಕ್ಯುಮೆಂಟ್ ಷೀಟುಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಸ್. ರಾಜೇಂದ್ರನ್ : ಸಂತೋಷ, ಹತ್ತು ರೂಪಾಯಿ ಸ್ಟಾಂಪ್ ಪೇಪರ್ ಬೇಕೆಂದರೆ ನಮ್ಮ ಬಂಗಾರು ಪೇಟೆಯಿಂದ ಮೈಸೂರು ಬ್ಯಾಂಕ್‌ಗೆ ಹೋಗಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ನಾವು ಅಲ್ಲಿಗೆ ಆಟೋದಲ್ಲಿ ಹೋಗಿ ಬರಲು 50 ರೂಪಾಯಿ ಖರ್ಚು ಮಾಡಬೇಕು. ಕೆ.ಜಿ.ಎಫ್. ನಿಂದ ಬಂಗಾರುಪೇಟೆಗೆ ಹಾಗೂ ಬಂಗಾರು ಪೇಟೆಯಿಂದ ಕೆ.ಜಿ.ಎಫ್. ಗೆ ಹಾಳೆ

ತೆಗೆದುಕೊಂಡು ಹೋಗುವುದಕ್ಕೆ ಬರಬೇಕು; ಅದರಿಂದ ನಮಗೆ ಬಹಳ ಖರ್ಚಾಗುತ್ತದೆ. ಈಗಾಗಲೇ ತಾವು ಅದರ ಬಗ್ಗೆ ವ್ಯವಸ್ಥೆ ಮಾಡುತ್ತೇನೆಂದು ಹೇಳಿದ್ದೀರಿ. ಕೆ.ಜಿ.ಎಫ್. ನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಿಂದ ನೀವು ಸ್ಟಾಂಪ್ ಪೇಪರ್ ಪಡೆಯುವ ವ್ಯವಸ್ಥೆ ಮಾಡಿದರೆ ನಮಗೆ ಬಹಳ ಸಂತೋಷವಾಗುತ್ತದೆ. ಅದರಿಂದ ನಮ್ಮ ಜನರಿಗೆ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಅವರ ಸಲಹೆ ಸೂಕ್ತವಾದುದು. ಈಗಾಗಲೇ ಅಲ್ಲಿನ ಶಾಖೆಯವರಿಗೆ ತಾವು ಪ್ರಾರಂಭ ಮಾಡಿ ಎಂದು ತಿಳಿಸಿದ್ದೇವೆ. ಅದರ ಜೊತೆಗೆ ಮಾನ್ಯ ಸದಸ್ಯರ ಅವಗಾಹನೆಗೆ ತರುತ್ತಿದ್ದೇನೆ, ತಾವು ಬಿಳಿ ಹಾಳಿ ಮೇಲೆ ಅಥವಾ ದಸ್ತಾವೇಜು ಶೀಟುಗಳ ಮೇಲೆ ಕೂಡ ನೋಂದಾಯಿಸಬಹುದು. ಈಗ ಛಾಪಾ ಕಾಗದದ ಮೇಲೆ ಮಾಡಬೇಕೆಂದು ಇಲ್ಲ. ಆದುದರಿಂದ ಅಲ್ಲಿರತಕ್ಕಂಥ ಜನಗಳಿಗೆ ಈ ಸ್ಟಾಂಪ್ ಪೇಪರ್ ಮೇಲೆ ಮಾಡಬೇಕೆಂದು ಹಳೇ ಕಾಲದ ಸಂಪ್ರದಾಯ ಇರುವುದರಿಂದ ಆ ರೀತಿ ಭಾವಿಸಿಕೊಳ್ಳುತ್ತಾರೆ. ಆದರೆ ಛಾಪಾ ಕಾಗದದ ಅವ್ಯವಹಾರ ಆದ ನಂತರ ಕಾನೂನಿಗೆ ತಿದ್ದುಪಡಿಯಾಗಿದೆ. ಬೆಳೆ ಹಾಳೆಯಲ್ಲಿ ಕೂಡ ತಾವು ನೋಂದಾವಣೆ ಮಾಡಬಹುದು. ಅಥವಾ ದಸ್ತಾವೇಜು ಶೀಟು ದಪ್ಪವಾಗಿರುತ್ತದೆ, ಅದು ಹಾಳಾಗದೆ ಇರುತ್ತದೆ. ಆ ಶೀಟ್‌ನಲ್ಲಿ ಕೂಡ ತಾವು ಮಾಡಿಬಹುದು. ಆದರೆ ತಾವು ಹೇಳಿದ ಹಾಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕೆಜಿಎಫ್ ಶಾಖೆಗೆ ಈ ಅಧಿಕಾರವನ್ನು ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತೇವೆ.

Sri S. Rajendran : Immediately you must consider ಏಕೆಂದರೆ court ಕಾಂಪ್ಲೆಕ್ಸ್ ಇದೆ; ಎಜುಕೇಷನ್ ಇನ್ಸ್‌ಟಿಟ್ಯೂಷನ್ ಇದೆ. ಅವರು ಏನು ಮಾಡುತ್ತಾರೆ ಎಂದರೆ ಪೇ ಆರ್ಡರ್ ಇಲ್ಲ, 10 ರೂಪಾಯಿಯ ಸ್ಟಾಂಪ್ ಪೇಪರ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. Kindly instruct by a very strong notification to the State Bank of Mysore to issue that. Thank you sir.

ಇ) ಗಂಗಾ ಕಲ್ಯಾಣ ಮತ್ತು ವೈಯುಕ್ತಿಕ ಕೊಳವೆ ಬಾವಿ ಯೋಜನೆಗಳ ಅನುಷ್ಠಾನದ ಬಗ್ಗೆ

ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಮತ್ತು ವೈಯುಕ್ತಿಕ ಕೊಳವೆ ಬಾವಿ ಯೋಜನೆಗಳ ಅನುಷ್ಠಾನದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಡಾ: ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು 1975ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು ಪ.ಜಾತಿ ಮತ್ತು ಪ.ವರ್ಗದ ಬಡಜನಗಳ